ದಿನಾಂಕ **: 16.10.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಮುಂದುವರಿದ ಪಾಟೀ ಸವಾಲುಃ</u> ಶ್ರೀ ಬಿ.ಕೆ., ಪ್ರತಿವಾದಿ ಪರ ವಕೀಲರಿಂದಃ

ಪ್ರತಾಪ್ ಶೆಟ್ಟಿಯವರು ನನಗೆ ಕಳೆದ 5 - 6 ವರ್ಷದಿಂದ ಪರಿಚಯವಿದ್ದಾರೆ. ಸರಿತಾ ಡಿ. ಶೆಟ್ಟಿಯವರು ಸುಮಾರು 10 ವರ್ಷದಿಂದ ಪರಿಚಯವಿದ್ದಾರೆ. ಕರಾರಿನ ಬಗ್ಗೆ ಸಾಕ್ಷಿ ನುಡಿಯಲು ಅವರನ್ನು ಕರೆಸಲು ಆಗುವುದಿಲ್ಲ. ಅವರಿಗೆ ಕರಾರಿನ ಬಗ್ಗೆ ಮಾಹಿತಿ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪ್ರತಾಪ್ ಶೆಟ್ಟಿ ಮತ್ತು ಸರಿತಾ ಶೆಟ್ಟಿಯವರ ಸಹಿಗಳನ್ನು ಪ್ರತಿವಾದಿಯೇ ಹಾಕಿಸಿದ್ದು, ಹಾಗೆ ಸಹಿ ಹಾಕಿಸಿದ ಸಮಯದಲ್ಲಿ ನಾನು ಇದ್ದೆ.ಸದರಿ ಸಹಿಗಳನ್ನು ಪ್ರತಿವಾದಿಯ ಅಂಗಡಿಯಲ್ಲಿ ಹಾಕಿಸಿರುತ್ತಾರೆ. ಪ್ರತಿವಾದಿಯು ಚಿನ್ನದ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಮೊದಲನೇ ಕರಾರು ಮಾಡಿದಾಗ ಪ್ರತಿವಾದಿಗೆ ಅದೇ ಚಿನ್ನದ ಅಂಗಡಿ ಇತ್ತು. ಅವರ ಅಂಗಡಿ ಸಣ್ಣ ಅಂಗಡಿಯೋ ಅಥವಾ ದೊಡ್ಡ ಅಂಗಡಿಯೋ ಎಂದು ನನಗೆ ಗೊತ್ತಾಗುವುದಿಲ್ಲ. ಮೊದಲಿನ ಕರಾರಿನ ಪ್ರಕಾರವಾಗಿ ನಾನು ಹಣ ಪಾವತಿಸಿದ್ದರೆ, ಪ್ರತಿವಾದಿಯು ಸದರಿ ಹಣವನ್ನು ತಮ್ಮ ಅಂಗಡಿಗೆ ಉಪಯೋಗಿಸುತ್ತಿದ್ದು, ನಾನು ಹಣ ನೀಡದ ಕಾರಣ ಸದರಿ ಕರಾರನ್ನು

ರದ್ದುಪಡಿಸಿದ್ದಾರೆ ಎಂದರೆ ಸರಿಯಲ್ಲ. ಮೊದಲಿನ ಕರಾರಿನ ಸಮಯದಲ್ಲಿ ಯಾವ ಕಾರಣಕ್ಕಾಗಿ ಹಣ ನೀಡಿರುವುದಿಲ್ಲ ಎಂದು ಪ್ರಶ್ನಿಸಿದರೆ, ನಾನು ಪ್ರತಿವಾದಿಯು ಕೇಳಿರುವಷ್ಟು ಹಣವನ್ನು ಪಾವತಿಸಿದ್ದೇನೆ. ಶೆಡ್ಯೂಲ್ ಸ್ಥಿರಾಸ್ತಿಯನ್ನು ಖರೀದಿಸುವಷ್ಟು ಹಣ ನನ್ನ ಬಳಿ ಇಲ್ಲದ ಕಾರಣ ನಾನು ಪಾವತಿಸಿದ ಮುಂಗಡ ಹಣವನ್ನು ಹಿಂದಿರುಗಿಸಬೇಕು ಎಂದು ಪ್ರತಿವಾದಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಸ್ನೇಹಿತರಾದ ಸುರೇಶ್ ರಾವ್ ರವರು ಪ್ರತಿವಾದಿಯ ಬಳಿ ಐದೂವರೆ ಲಕ್ಷ ರೂಗಳ ಖಾಲಿ ಚೆಕನ್ನು ಪಡೆದುಕೊಂಡು ಹೋಗಿದ್ದೇವೆ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ನಾನು ನನ್ನ ಸ್ನೇಹಿತರಾದ ಅಮರ್ ನಾಥ್ ಎನ್ನುವವರ ಮೂಲಕ ಹಾಜರುಪಡಿಸಿ, ಅದಕ್ಕೆ ಸಂಬಂಧಿಸಿದಂತೆ ತೀರ್ಥಹಳ್ಳಿ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ. ಮೂಲ ದಾಖಲೆಗಳನ್ನು ಹಿಂದಿರುಗಿಸಿದಾಗ, ಖಾತೆಯಲ್ಲಿ ಐದೂವರೆ ಲಕ್ಷ ರೂಗಳನ್ನು ಇಡಬೇಕು ಎಂದು ಚೆಕ್ ತೆಗೆದುಕೊಂಡು ಹೋಗುವ ಸಮಯದಲ್ಲಿ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ನಾನು ಚೆಕ್ ತೆಗೆದುಕೊಂಡಿರುವುದಿಲ್ಲ. ಮೂಲ ದಾಖಲೆಗಳನ್ನು ಹಿಂದಿರುಗಿಸದ ಕಾರಣ ಖಾತೆಯಲ್ಲಿ ಅಷ್ಟು ಹಣ ಜಮೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಎರಡನೇ ಕರಾರು ನ್ಯಾಯಸಮ್ಮತವಾಗಿ ಆಗಿರುವುದಿಲ್ಲ ಮತ್ತು ಅದನ್ನು ಒತ್ತಾಯಪೂರ್ವಕವಾಗಿ ನಾನು ಬರೆಸಿದ್ದೇನೆ ಎಂದರೆ ಸರಿಯಲ್ಲ. ಕರಾರಿನ ಅನ್ವಯ ಈ ದಾವೆ ಸಲ್ಲಿಸಲು ನನಗೆ ಯಾವುದೇ ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ. ಕಟ್ಟುಕತೆಗಳನ್ನು ಕಟ್ಟಿ ಪ್ರತಿವಾದಿಯ ವಿರುದ್ಧ

ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ಅನುಮತಿ ಇಲ್ಲದೇ ಯಾರಿಗೆ ಬೇಕಾದರೂ ಮಾರಾಟ ಮಾಡಲು ಪ್ರತಿವಾದಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸ್ವತ್ತನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿದ್ದು, ಅವರು ಯಾರು ಎಂದು ನನಗೆ ತಿಳಿದಿಲ್ಲ. ಸ್ವತ್ತನ್ನು ಒತ್ತೆ ಇಡಲು ಹೋಗುತ್ತಿದ್ದಾರೆ ಎಂದು ತಿಳಿಸಿದ್ದು, ಪ್ರತಿವಾದಿಯು ಅದರ ವಿಚಾರವಾಗಿ ಬ್ಯಾಂಕ್ ಹೋಗುತ್ತಿದ್ದುದ್ದನ್ನು ನಾನು ನೋಡಿದ್ದೇನೆ. ಪಹಣಿ ಪತ್ರಿಕೆಗಳನ್ನು ತಾಲೂಕು ಕಚೇರಿಯಲ್ಲಿ ತೆಗೆಯುವ ಸಮಯದಲ್ಲಿ ಈ ವಿಚಾರ ನನಗೆ ತಿಳಿದಿರುತ್ತದೆ.

ಸ್ವತ್ತನ್ನು ನೊಂದಣಿ ಮಾಡಿಸಿಕೊಡಿ ಎಂದು ಪ್ರತಿವಾದಿಗೆ ಕೇಳಿದ್ದೇನೆ. ಸ್ವತ್ತನ್ನು ನೊಂದಣಿ ಮಾಡಿಸಿಕೊಡಿ ಎಂದು ನಾನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ 20 ಸೆಂಟ್ಸ್ ಮಾತ್ರ ನಾನು ಕೇಳುತ್ತಿದ್ದು, ಉಳಿದ 13 ಸೆಂಟ್ಸ್ ಸ್ವತ್ತನ್ನು ಒತ್ತೆ ಇಡಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನಾನು ಚೆಕ್‌ನ್ನು ಬೇರೆಯವರ ಹೆಸರಿನಲ್ಲಿ ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದು ಪ್ರತಿವಾದಿಯು ನನ್ನ ವಿರುದ್ಧ ಹೆಬ್ರಿ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಬಳಿ ಇಲ್ಲಿಯವರೆಗೂ ಸಹಾ ಹಾಗೂ ಎಂದಿಗೂ 15 ಲಕ್ಷ ರೂಗಳು ಇರಲಿಲ್ಲ ಎಂದರೆ ಸರಿಯಲ್ಲ. ಹಾಗೆ ನನ್ನ ಬಳಿ 15 ಲಕ್ಷ

ರೂಗಳು ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳು ಇರುತ್ತದೆ. ಅದನ್ನು ಹಾಜರುಪಡಿಸಬಹುದು. ಇಲ್ಲಿಯವರೆಗೂ ಅದರ ದಾಖಲೆಗಳನ್ನು ಹಾಜರುಪಡಿಸದೇ ಇರಲು ಯಾವುದೇ ಸಕಾರಣ ಇರುವುದಿಲ್ಲ. ನನ್ನ ಬಳಿ ಅಷ್ಟು ಹಣ ಇಲ್ಲದ ಕಾರಣ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಜಾಗವನ್ನು ಹೊಡೆಯುುವ ದುರುದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವನ್ನು ದುರುಪಯೋಗಪಡಿಸಿಕೊಂಡು ಉಳಿದ 13 ಸೆಂಟ್ಸ್ ಸ್ವತ್ತಿನ ನಮೂನೆ 9 ಮತ್ತು 11 ನ್ನು ಪಡೆಯಲು ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.